**ಡಿ.ಡಬ್ಲೂ-01**

**ದಿನಾಂಕಃ 29-10-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿಯ ಪ್ರಮಾಣೀಕೃತ ಹೇಳಿಕೆಃ**

| | |
|---|---|
| ಹೆಸರು | **ಅನಿತ** |
| ಗಂಡನ ಹೆಸರು | **ರವಿಕುಮಾರ್** |
| ವಯಸ್ಸು | **44** |
| ಉದ್ಯೋಗ | **ಗಾರ್ಮೆಂಟ್ ಕೆಲಸ** |
| ವಿಳಾಸ | **ತಾವರೆಕೆರೆ** |

01. ನಾನು 2022 ನೇ ಇಸವಿಯ ಸೆಪ್ಟಂಬರ್ ತಿಂಗಳಿನಲ್ಲಿ ಕೋಳಿ ಅಂಗಡಿಯನ್ನು ಮಾಡಿದೆನು. ಕೋಳಿಯನ್ನು ಒಂದು ವಾರದಿಂದ 15 ದಿನಗಳ ತನಕ ಸ್ಟಾಕ್ ನ್ನು ಹಾಕಿಸಿಕೊಳ್ಳುತ್ತಿದ್ದೇವು, ಆಗಾಗಿ ದೂರುದಾರರ ಬಳಿ ವಾರದಿಂದ 15 ದಿನಗಳ ವರೆಗೆ 10 ರಿಂದ 15 ಸಾವಿರ ಹಣವನ್ನು ಕೊಡುವಂತೆ ಕೇಳಿಕೊಂಡೆನು. ಅದನ್ನು ಅವರು ಒಪ್ಪಿ ಕೊಂಡಿರುತ್ತಾರೆ. ನಾವು ಸದರಿ ಹಣಕ್ಕೆ ಬಡ್ಡಿಯನ್ನು ಸಹ ನೀಡುತ್ತೇವೆ ಎಂದು ಹೇಳಿರುತ್ತೇವೆ. ದೂರುದಾರರು ಭದ್ರತೆಗಾಗಿ ಚೆಕ್ ನ್ನು ನೀಡುವಂತೆ ಕೇಳಿದ್ದರು. ಆದ ಕಾರಣ ನಾನು ಭದ್ರತೆಗಾಗಿ ನಿಪಿ-1ರ ಚೆಕ್ ನ್ನು ದೂರುದಾರರಿಗೆ ನೀಡಿದೆನು. ದೂರುದಾರರು ವಾರದಿಂದ 15 ದಿನಗಳಿಗೇ ಒಮ್ಮೆ ಅವರ ಬ್ಯಾಂಕ್ ಖಾತೆಯಿಂದ ನನ್ನ ಬ್ಯಾಂಕ್ ಖಾತೆಗೆ ರೂ. 10 ರಿಂದ 15 ಸಾವಿರ ಹಣವನ್ನು ಹಾಕುತ್ತಿದ್ದರು. ನಾನು ಅವರಿಗೆ ಅಕೌಂಟ್ ಮುಖಾಂತರವೇ ರೂ. 10 ರಿಂದ 15 ಸಾವಿರಕ್ಕೆ ಬಡ್ಡಿ ಸಮೇತ ಪಾವತಿ ಮಾಡಿರುತ್ತೇನೆ. ಈ ರೀತಿಯಾಗಿ ವರ್ಷ ಗಟ್ಟಲೆ ವ್ಯವಹಾರವು ಬ್ಯಾಂಕ್ ಖಾತೆಯ ಮುಖಾಂತರವೇ ನಡೆದಿರುತ್ತದೆ.

02. ನನಗೆ ಮತ್ತೆ ನನ್ನ ಯಜಮಾನರಿಗೆ ಆರೋಗ್ಯ ಸರಿಇಲ್ಲದೇ ಇದ್ದ ಕಾರಣ 2023 ನೇ ಇಸವಿಯ ಅಕ್ಟೊಬರ್ ತಿಂಗಳಿನಲ್ಲಿ ನಾವು ನಮ್ಮ ಕೋಳಿ

ಅಂಗಡಿಯನ್ನು ಮುಚ್ಚಿದೆವು. ನಂತರ ನಾನು ದೂರುದಾರರ ಬಳಿ ನನ್ನ ಚೆಕ್ ನ್ನು ವಾಪಸ್ಸು ಕೊಡುವಂತೆ ಕೇಳಿದಾಗ ಅವರು ಇವತ್ತಲ್ಲ ನಾಳೆ ಕೊಡುತ್ತೇನೆ ಎಂದರು ಮತ್ತು ನಂತರ ನನ್ನ ಚೆಕ್ ಕಳೆದು ಹೋಗಿದೆ ಎಂದು ತಿಳಿಸಿದರು. ನಾನು ದೂರುದಾರರಿಗೆ ಯಾವುದೇ ಹಣವನ್ನು ನೀಡುವಂತಿಲ್ಲ. ನಗದು ಮುಖಾಂತರ ನನ್ನ ಮತ್ತು ದೂರುದಾರರ ನಡುವೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ. ದೂರುದಾರರು ನನ್ನ ವಿರುದ್ದ ಸುಳ್ಳು ಪ್ರಕರಣವನ್ನು ಸಲ್ಲಿಸಿದ್ದಾರೆ. ನನಗೆ ನ್ಯಾಯಾ ದೊರಕಿಸಿಕೊಡಿ.

**ಈ ಕೆಳಕಂಡ ದಾಖಲೆಗಳನ್ನು ಗುರುತಿಸಿಕೊಂಡಿರುತ್ತೇನೆ.**

**ನಿಡಿ-01-** ಸ್ಟೇಟ್ ಮೆಂಟ್ ಅಫ್ ಅಕೌಂಟ್ ನ ದೃಢೀಕೃತ ನಕಲು( ಒಟ್ಟು 12 ಪುಟಗಳು) ಸದರಿ ದಾಖಲೆಗಳನ್ನು ಭಾರತೀಯ ಸಾಕ್ಷ್ಯ ಅಧಿನಿಯಮದ ಕಲಂ.65-ಬಿ ಅಡಿಯಲ್ಲಿ ಪ್ರಮಾಣಪತ್ರದೂಂದಿಗೆ ಗುರುತಿಸಲಾಯಿತು.

**ಈ ಹಂತದಲ್ಲಿ ದೂರುದಾರರ ಪರ ವಕೀಲರು ಪಾಟೀ ಸವಾಲಿಗೆ ಸಮಯಕೋರಿದ್ದು, ಸಮಯ ನೀಡಲಾಯಿತು.**

**2ನೇ ಅಪರ ಸಿವಿಲ್ ಮತ್ತು ಮತ್ತು ಜೆ.ಎಂ.ಎಫ್.ಸಿ,**
**ನ್ಯಾಯಾಲಯ, ಮಾಗಡಿ.**